ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 84-88
©*IIMRD*, Mysuru
IIMRD JOURNALS
www.iimrd.com

# ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆ: ಗಾಂಧೀಜಿಯವರ ಪಾತ್ರ

**ಡಾ. ಸಂಗನಗೌಡ ಶಿವನಗೌಡ**
ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸುಗೂರು

**ಸಾರಾಂಶ: (Abstract)**

*ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿದ ಮಹತ್ವದ ನಾಯಕರಲ್ಲಿ ಮಹಾತ್ಮ ಗಾಂಧೀಜಿಯವರು ಪ್ರಮುಖರಾಗಿದ್ದಾರೆ. ಸತ್ಯ, ಅಹಿಂಸೆ ಮತ್ತು ಅಸಹಕಾರದಂತಹ ತತ್ವಗಳ ಮೂಲಕ ಮಹಿಳೆಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸಿದರು. ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ ಸೇರಿದಂತೆ ವಿವಿಧ ಹೋರಾಟಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಗಾಂಧೀಜಿಯವರ ನಾಯಕತ್ವ ಪ್ರೇರಣೆಯಾಯಿತು. ಕಸ್ತೂರಬಾ ಗಾಂಧಿ, ಸರೋಜಿನಿ ನಾಯ್ಡು, ಅರುಣಾ ಆಸಫ್ ಅಲಿ ಸೇರಿದಂತೆ ಅನೇಕ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಮಹಿಳೆಯರ ರಾಜಕೀಯ ಮತ್ತು ಸಾಮಾಜಿಕ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಮೂಲಕ ಗಾಂಧೀಜಿಯವರು ಮಹಿಳಾ ಸಬಲೀಕರಣಕ್ಕೂ ಮಹತ್ವದ ಕೊಡುಗೆ ನೀಡಿದರು. ಈ ಲೇಖನವು ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾತ್ರವನ್ನು ರೂಪಿಸುವಲ್ಲಿ ಗಾಂಧೀಜಿಯವರ ಚಿಂತನೆ, ನಾಯಕತ್ವ ಮತ್ತು ಪ್ರೇರಣೆಯ ಮಹತ್ವವನ್ನು ವಿಶ್ಲೇಷಿಸುತ್ತದೆ.*

**ಮುಖ್ಯಪದಗಳು (Keywords):** *ಮಹಾತ್ಮ ಗಾಂಧೀಜಿ, ಸ್ವಾತಂತ್ರ್ಯ ಚಳುವಳಿ, ಮಹಿಳಾ ಭಾಗವಹಿಸುವಿಕೆ, ಮಹಿಳಾ ಸಬಲೀಕರಣ, ರಾಷ್ಟ್ರೀಯ ಚಳುವಳಿ*

## ಪೀಠಿಕೆ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಹಿಳೆಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದ ಪ್ರಮುಖ ನಾಯಕರಲ್ಲಿ ಮಹಾತ್ಮ ಗಾಂಧೀಜಿಯವರು ಪ್ರಮುಖರಾಗಿದ್ದಾರೆ. ಭಾರತೀಯ ಸಮಾಜದಲ್ಲಿ ಶತಮಾನಗಳಿಂದಲೂ ಅಲಕ್ಷಿತವಾಗಿದ್ದ ಮಹಿಳಾ ಶಕ್ತಿಯನ್ನು ಜಾಗೃತಗೊಳಿಸಿ, ಅವರನ್ನು ರಾಜಕೀಯ ಮತ್ತು ಸಾಮಾಜಿಕ ಚಳುವಳಿಗಳಲ್ಲಿ ಮುಂಚೂಣಿಗೆ ತರುವಲ್ಲಿ ಗಾಂಧೀಜಿಯವರು ಮಹತ್ವದ ಪಾತ್ರ ವಹಿಸಿದರು. ಇದರಿಂದ ಮಹಿಳೆಯರಿಗೂ ದೇಶಸೇವೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ದೊರೆಯಿತು. ಗಾಂಧೀಜಿಯವರ ಕಾಲದಲ್ಲಿ ಅನೇಕ ಮಹಿಳೆಯರು ಸ್ವಾತಂತ್ರ್ಯ ಹೋರಾಟಗಾರ್ತಿಯರಾಗಿ ಗುರುತಿಸಿಕೊಂಡರು. ಕಿತ್ತೂರು ರಾಣಿ ಚೆನ್ನಮ್ಮ,

*Please cite this article as:* ಸಂಗನಗೌಡ ಶಿವನಗೌಡ. (2026). ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆ: ಗಾಂಧೀಜಿಯವರ ಪಾತ್ರ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 84–88

ಬೆಳವಡಿ ಮಲ್ಲಮ್ಮ, ರಾಣಿ ಲಕ್ಷ್ಮೀಬಾಯಿ ಮುಂತಾದವರು ಬ್ರಿಟಿಷರ ವಿರುದ್ಧದ ಹೋರಾಟದ ಪ್ರೇರಣಾದಾಯಕ ಪ್ರತೀಕಗಳಾಗಿ ಕಾಣಿಸಿಕೊಂಡರು. ಇನ್ನು ತೆರೆಮರೆಯಲ್ಲಿ ಅನೇಕ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತಮ್ಮ ಪ್ರಾಣವನ್ನೂ ತ್ಯಾಗ ಮಾಡಿದ್ದಾರೆ. ಆದರೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಗುರುತಿಸಲ್ಪಟ್ಟ ಮಹಿಳೆಯರು ಕೆಲವೇ ಕೆಲವರಾಗಿದ್ದಾರೆ ಎಂಬುದನ್ನು ಅಲ್ಲಗಳೆಯಲಾಗದು. ಮಹಿಳೆಯರಲ್ಲಿ ಸ್ವಾತಂತ್ರ್ಯ ಚಳುವಳಿಯ ಕಿಡಿಯನ್ನು ಹೊತ್ತಿಸುವಲ್ಲಿ ಗಾಂಧೀಜಿಯವರ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ರಾಷ್ಟ್ರೀಯ ಹೋರಾಟದ ಆರಂಭಿಕ ಹಂತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಬಹುತೇಕ ರಚನಾತ್ಮಕ ಕಾರ್ಯಕ್ರಮಗಳಿಗೆ ಸೀಮಿತವಾಗಿತ್ತು. ಆದರೆ ಕ್ರಮೇಣ ಈ ಮಿತಿಯಿಂದ ಹೊರಬಂದು ರಾಷ್ಟ್ರೀಯ ಚಳುವಳಿಯಲ್ಲಿ ನೇರವಾಗಿ ಭಾಗವಹಿಸುವ ಅಗತ್ಯವನ್ನು ಮಹಿಳೆಯರು ಮನಗಂಡರು. ನಾಗರಿಕ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರು ಮನೆ ಮತ್ತು ಮಕ್ಕಳ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ರಾಷ್ಟ್ರೀಯ ಚಳುವಳಿಯಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡರು. ಕೆಲವು ಮಹಿಳೆಯರು ತಮ್ಮನ್ನು ಸಂಪೂರ್ಣವಾಗಿ ರಾಷ್ಟ್ರೀಯ ಚಳುವಳಿಗೆ ಸಮರ್ಪಿಸಿಕೊಂಡರು. ಅವರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಣಜಿಕರ್, ಗೌರಮ್ಮ ವೆಂಕಟರಾಮಯ್ಯ, ಸಿದ್ದಮ್ಮ ಜೋಯಿಸ್, ಸರೋಜಿನಿ ನಾಯ್ದು, ವಿಜಯಲಕ್ಷ್ಮಿ ಪಂಡಿತ್, ಕಸ್ತೂರಬಾ ಗಾಂಧಿ, ಅಮೃತ್ ಕೌರ್, ಆನಿಬೆಸೆಂಟ್ ಮತ್ತು ಬಳ್ಳಾರಿ ಸಿದ್ದಮ್ಮ ಮುಂತಾದವರು ಪ್ರಮುಖರಾಗಿದ್ದಾರೆ. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ರಾಷ್ಟ್ರೀಯ ಚಳುವಳಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ಮಹಿಳೆಯರನ್ನು ರಾಷ್ಟ್ರೀಯ ಹೋರಾಟದ ಮುಖ್ಯವಾಹಿನಿಗೆ ಕರೆತಂದು, ಅವರಲ್ಲಿ ದೇಶಪ್ರೇಮ, ಆತ್ಮವಿಶ್ವಾಸ ಮತ್ತು ಹೋರಾಟದ ಮನೋಭಾವವನ್ನು ಬೆಳೆಸಿದ ಕೀರ್ತಿ ಮಹಾತ್ಮ ಗಾಂಧೀಜಿಯವರಿಗೆ ಸಲ್ಲುತ್ತದೆ.

ದಕ್ಷಿಣ ಆಫ್ರಿಕದಲ್ಲಿ ಮಹಿಳೆಯರನ್ನು ಸಂಘಟಿಸಿ ಅವರನ್ನು ಆಹಿಂಸ ಚಳುವಳಿಯಲ್ಲಿ ತೊಡಗಿಸುವುದರ ಮೂಲಕ ಯಶಸ್ವಿಯಾಗಿದ್ದರು ಆ ಸಂದರ್ಭದಲ್ಲಿ ಭಾರತದಾದ್ಯಂತ ಸಂಚರಿಸಿ ಭಾರತೀಯ ಮನಸ್ಸುಗಳನ್ನು ಹೋರಾಟಕ್ಕೆ ಅಣಿಗೊಳಿಸಿದರು. ಅವರ ಮೊದಲ ಆದ್ಯತೆ ಸ್ವಾತಂತ್ರ್ಯಗೊಳಿಸುವುದು ಮತ್ತು ಸ್ತ್ರೀಯರ ಸಮಸ್ಯೆಗಳ ವಿರುದ್ಧ ಹೋರಾಟ ಮಾಡುವುದಾಗಿತ್ತು ಗಾಂಧೀಜಿಯವರು ಮೂಲಭೂತವಾಗಿ ಸಾತ್ವಿಕರು. ಧರ್ಮ ರೂಢಿ ಸಂಪ್ರದಾಯ ಎಲ್ಲವನ್ನು ತಳ್ಳಿ ಹಾಕುತ್ತಿರಲಿಲ್ಲ ಆದರೆ ಅದರ ಬಗ್ಗೆ ಚಿಂತನಶೀಲರಾಗಿದ್ದರು ಅವರು ಧರ್ಮದ ಜೊತೆಗೆ ಮಾನವೀಯ ಮೌಲ್ಯಗಳನ್ನ ಅಂತ ಕರಣಗೊಳಿಸಿಕೊಂಡಿದ್ದರು. ಈ ದೃಷ್ಟಿಯಿಂದಲೇ ಮಹಿಳೆಯರನ್ನು ಸಹ ನೋಡುತ್ತಿದ್ದರು ಅವರು ಮಹಿಳೆಯರ ವಿಚಾರದಲ್ಲಿ ಸಮನ್ವಯ ಸಿದ್ಧಾಂತ ಹೊಂದಿದ್ದವರು ಆಗಿದ್ದರು ಮಹಿಳೆಯರೊಂದಿಗೆ ಸಮಾಲೋಚಿಸಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರು ಮಹಿಳೆಯರ ಘನತೆ, ಗೌರವ ಹಕ್ಕು, ಬಾಧ್ಯತೆಗಳಿಗೆ ವಿರುದ್ಧವಾಗಿರುವ ಎಲ್ಲಾ ಧರ್ಮಗಳನ್ನು ನಿಷೇಧಿಸಬೇಕೆಂದು ಕರೆ ನೀಡಿದರು ಗಂಡಸು ಹೆಂಗಸನ್ನು ತನ್ನ ಸಾಧನವೆಂದು ಬಗೆದಿದ್ದಾರೆ.

ಹೆಂಗಸೂ ಕೂಡ ಗಂಡಸಿನ ಸಾಧನವಾಗಲೂ ಕಲಿತಿದ್ದಾಳೆ .(ಡಾ.ಹಾಲತಿ ಸೋಮಶೇಖರ; ಮಹಿಳಾ ಚಳುವಳಿ ಪು 253).

ರಾಷ್ಟ್ರೀಯ ಹೋರಾಟ ಗಾಂಧೀಜಿಯವರ ನೇತೃತ್ವಕ್ಕೆ ಬಂದಾಗ ಮಹಿಳೆಯರ ಭಾಗವಹಿಸುವಿಕೆಯನ್ನು ಸುಗಮ ಹಾಗೂ ಅರ್ಥಪೂರ್ಣಗೊಳಿಸಿದರು ಸ್ತ್ರೀ ಹಾಗೂ ಅಹಿಂಸೆಯನ್ನು ಸಮೀಕರಿಸಿದರು ಮಹಿಳೆಯರ ರಾಜಕೀಯ ಹೋರಾಟವನ್ನು ಸಾಮಾಜಿಕ ಮನ್ನಣೆ ದೊರೆಯಲು ಅನುವು ಮಾಡಿಕೊಟ್ಟರು. ಹಳ್ಳಿಹಳ್ಳಿಯಿಂದಲೂ ಮಹಿಳಾ ಹೋರಾಟಗಾರರು ಉಪವಾಸ ಸತ್ಯಾಗ್ರಹದಲ್ಲಿ ನೇರವಾಗಿಯೆ ಭಾಗವಹಿಸಿದರು ಮೊದಲು ರಾಷ್ಟ್ರೀಯ ಚಳುವಳಿ ಹುಟ್ಟಿಕೊಂಡಿದ್ದು ಕ್ರಾಂತಿಕಾರರ ಚಳುವಳಿಯ ಮೂಲಕ ಗಾಂಧೀಜಿಗೆ ಬ್ರಿಟಿಷರನ್ನು ಓಡಿಸುವ ಗುರಿ ಒಂದೇ ಆಗಿರಲಿಲ್ಲ ಜೊತೆಗೆ ಕ್ರಾಂತಿಕಾರರನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದ್ದರು. ಮಹಿಳೆಯರನ್ನು ಹೋರಾಟಕ್ಕೆ ಭಾಗವಹಿಸುವುದು ಮೂಲ ಉದ್ದೇಶ ಪುರುಷರ ಕ್ರಾಂತಿಕಾರಕ ಹೋರಾಟವನ್ನು ಹಿಂದೆ ಸರಿಸುವುದಾಗಿತ್ತು.

ಮಹಿಳೆಯರು ಬ್ರಿಟಿಷರು ತಯಾರಿಸಿದ ಉಪ್ಪನ್ನು ವಿರೋಧಿಸಿ ಸಮುದ್ರದ ನೀರನ್ನು ತೆಗೆದುಕೊಂಡು ಹೋಗಿ ಉಪ್ಪು ತಯಾರಿಸಿ ಹಗ್ಗದ ಬೆಲೆಗೆ ಮಾರಾಟ ಮಾಡುತ್ತಿದ್ದರು ಹೀಗೆ ಉಪ್ಪಿನ ಸತ್ಯಾಗ್ರಹ ಹಾಗೂ ಅಸಹಕಾರ ಚಳುವಳಿಯಲ್ಲಿ ಮಹಿಳೆಯರು ತಮ್ಮನ್ನು ಹೆಚ್ಚು ತೊಡಗಿಸಿಕೊಂಡರು. ಮಹಿಳೆ ಎಂದರೆ ಮನೆಗೆ ಮಾತ್ರ ಸೀಮಿತ ಎಂದುಕೊಂಡ ಕಾಲದಲ್ಲಿ ಮಹಿಳೆಯರ ಶಕ್ತಿ ಸಾಮರ್ಥ್ಯ, ಆಲೋಚನೆ ಮುಂತಾದವುಗಳು ಸ್ವಾತಂತ್ರ್ಯ ಹೋರಾಟಕ್ಕಾಗಿ ಮಹಿಳೆಯರನ್ನು ಪ್ರೇರೇಪಿಸಿ ಮುಖ್ಯವಾಹಿನಿಗೆ ಬರಲು ಗಾಂಧೀಜಿಯವರು ಕಾರಣರಾದವರು. ಖಾದಿ, ವಿದೇಶಿ ವಸ್ತ್ರ ವಿರೋಧಿ, ಮದ್ಯಪಾನದ ಅಂಗಡಿ ಮುಂದೆ ಪಿಕೇಟಿಂಗ್ ನಡೆಸುತ್ತಾರೆಂದರೆ ಆ ಕಾಲದಲ್ಲಿ ಮಹಿಳೆಯರು ಮಾಡುವ ಒಂದು ದೊಡ್ಡ ಕ್ರಾಂತಿಯೇ ಸರಿ.

1917ರಲ್ಲಿ ಮಾಂಟೆಗೊ ಮತ್ತು ಜೈನ್ಸ್ ಫೋಲ್ಡ್ ಅವರು ಸುಧಾರಣೆ ಕುರಿತು ಚರ್ಚಿಸಲು ಭಾರತಕ್ಕೆ ಬಂದ ಸಂದರ್ಭದಲ್ಲಿ ಮಹಿಳಾ ನಿಯೋಗದೊಂದಿಗೆ ಅನಿಬೆಸೆಂಟ್ ಹಾಗೂ ಸರೋಜಿನಿ ನಾಯ್ಡು ಅವರನ್ನು ಭೇಟಿ ಮಾಡಿ ಪುರುಷರಿಗೆ ನೀಡಿರುವ ಪ್ರಾತಿನಿಧಿತ್ವ ಮಹಿಳೆಯರಿಗೂ ದೊರೆಯಬೇಕೆಂದು ಒತ್ತಾಯಿಸಿದರು. ಗಾಂಧೀಜಿ ಯವರು ರಾಷ್ಟೀಯ ಹೋರಾಟದ ಜೊತೆಗೆ ಮಹಿಳೆಯರ ಸಮಸ್ಯೆಯನ್ನು ಸೆಮಿಕರಿಸಿದರು ಗಾಂಧೀಜಿಯವರು ವಿಧವಾ ಪುನರ್ ವಿವಾಹದ ಬಗ್ಗೆ ಹೀಗೆ ಹೇಳುತ್ತಾರೆ ವಿದುರನ್ನೊಬ್ಬ ಪುನರ್ ವಿವಾಹವಾಗುವಂತೆ ಇಚ್ಛೆಯಿಂದ ವಿದುವೆಯಾಗಿರುವುದು ಹಿಂದೂ ಧರ್ಮದ ಬೆಲೆಯಿಲ್ಲದ ಒಂದು ವರ, ಬಲವಂತದ ವಿಧವೆತನ ಒಂದು ಶಾಪ (ಸುನಿತಾ; ಮಹಿಳಾ ಹಕ್ಕುಗಳ ಗಾಂಧೀಜಿ. ಪು 104) ಎನ್ನಲಾಗಿತ್ತು.

1930ರಲ್ಲಿ ಅಖಿಲ ಭಾರತದ ಮಹಿಳಾ ಸಮ್ಮೇಳನ ನಡೆಸಿ ರಾಜಕೀಯಾತೀಯವಾದ ಸಂಘಟನೆಯಾಗಿ ಮಹಿಳಾ ಸಭಾ ರೂಪಗೊಳ್ಳುವ ನಿರ್ಧಾರ ಕೈಗೊಂಡರು. ಇದರ ಫಲವಾಗಿ ಹೋರಾಟವು ಕ್ರಿಯಾಶೀಲವಾಯಿತು. 1930 ಎಪ್ರಿಲ್ 6 ರಂದು ಪಾನ ನಿಷೇಧ ಚಳುವಳಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗಿಯಾದರು. ಚಳುವಳಿಯಲ್ಲಿ ಗಾಂಧೀಜಿವರು ಮಾತನಾಡುತ್ತಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ ಸುವರ್ಣಾಕ್ಷರದಲ್ಲಿ ಬರೆದಿಡತಕ್ಕಂಥದ್ದು ಎಂದು ಉದ್ಗರಿಸಿದರು.

## ಗಾಂಧೀಜಿಯವರ ದೃಷ್ಟಿಕೋನಗಳು

**ಮಹಿಳಾ ಸಬಲೀಕರಣ**

ಗಾಂಧೀಜಿ ಮಹಿಳೆಯನ್ನು "ಶಕ್ತಿ"ಯ ರೂಪವಾಗಿ ನೋಡಿದರು. ಅವರು ಮಹಿಳೆಯರಲ್ಲಿ ಅಹಿಂಸಾ, ತ್ಯಾಗ, ಸಹನೆ, ಶುದ್ಧತೆ ಮೊದಲಾದ ನೈತಿಕ ಗುಣಗಳು ಆಳವಾಗಿ ನೆಲಸಿವೆ ಎಂದು ನಂಬಿದರು. ಸಮಾಜದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯವರಂತೆ ಕಾಣಲಾಗುತ್ತಿದ್ದ ಸಮಯದಲ್ಲಿ, ಗಾಂಧೀಜಿ ಅವರಿಗೆ ಸ್ವಾಭಿಮಾನ ಮತ್ತು ಸ್ವತಂತ್ರ ಚಿಂತನೆಯ ಭಾವನೆ ನೀಡಿದರು.

**ಸತ್ಯಾಗ್ರಹ ಮತ್ತು ಮಹಿಳೆಯರ ಭಾಗವಹಿಸುವಿಕೆ**

ಚಂಪಾರಣ, ಖೇಡಾ ಮತ್ತು ಅಹಮದಾಬಾದ್ ಹೋರಾಟಗಳಲ್ಲಿ, ಮಹಿಳೆಯರು ಮೊಟ್ಟಮೊದಲ ಬಾರಿಗೆ ಹೋರಾಟದ ಮುಂಚೂಣಿಗೆ ಬಂದರು. ಅಸಹಕಾರ ಚಳುವಳಿ (1920–22) ಮಹಿಳೆಯರು ಮದ್ಯ, ವಿದೇಶಿ ಬಟ್ಟೆಗಳ ಬಹಿಷ್ಕಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಉಪ್ಪಿನ ಸತ್ಯಾಗ್ರಹ (1930) ಮಹಿಳೆಯರ ಭಾಗವಹಿಸುವಿಕೆಗೆ ಇದು ಮಹತ್ವದ ಘಟ್ಟ. ಕಸ್ತೂರಿ ಬಾ ಗಾಂಧೀ, ಸರೋಜಿನಿ ನಾಯ್ಡು, ಕಮಲಾ ನೆಹರು, ಅವಂತಿಕಾಬಾಯಿ ಮೊದಲಾದವರು ಉಪ್ಪು ಕಾಯ್ದೆಗೆ ವಿರುದ್ಧವಾಗಿ ಅಗ್ರಗಣ್ಯ ನಾಯಕತ್ವ ವಹಿಸಿದರು.

ಕುವೈಟ್ ಇಂಡಿಯಾ ಮೂವ್ಮೆಂಟ್ (1942) "ಅಂಗ್ರೇಜೋ ಭಾರತ ಛೋಡೋ" ಘೋಷಣೆಯಲ್ಲಿ ಮಹಿಳೆಯರು ಮುಂಚೂಣಿಗೆ ಬಂದರು. ಅರುಣಾ ಆಸಫ್ಅಲಿ, ಸುಚೇತಾ ಕೃಪ್ಲಾನಿ, ಉಷಾ ಮೇಹ್ತಾ ಮೊದಲಾದವರು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಪಾಲ್ಗೊಂಡರು.

**ಮಹಿಳೆಯರಿಗೆ ಗಾಂಧೀಜಿಯವರ ಸಂದೇಶ**

ಗಾಂಧೀಜಿ ಮಹಿಳೆಯರನ್ನು ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದಾಗ ಅವರು ನೀಡಿದ ಮುಖ್ಯ ಮಾರ್ಗದರ್ಶನ: ಅಹಿಂಸಾತ್ಮಕ ಹೋರಾಟದಲ್ಲಿ ಮಹಿಳೆಯರ ಪಾತ್ರ ಪುರುಷರಿಗಿಂತ ಕಡಿಮೆ ಇಲ್ಲ. ಮಹಿಳೆಯರ ಧೈರ್ಯ ಮತ್ತು ತ್ಯಾಗ ರಾಷ್ಟ್ರಕ್ಕೆ ಬಲ ನೀಡುತ್ತದೆ. "ಮಹಿಳೆ ಮನೆಯೊಳಗಿನ ದೇವತೆ ಮಾತ್ರವಲ್ಲ, ದೇಶದ ತಾಯಿ" ಎಂಬ ಧೋರಣೆಯನ್ನು ಅವರು ಒತ್ತಿಹೇಳಿದರು.

**ಪ್ರಮುಖ ಮಹಿಳಾ ನಾಯಕಿಯರ ಉದಯ**

ಗಾಂಧೀಜಿಯವರ ಪ್ರೇರಣೆಯಿಂದ ಹಲವು ಮಹಿಳೆಯರು ರಾಷ್ಟ್ರೀಯ ಹೋರಾಟದ ನಾಯಕರಾಗಿ ಹೊರಹೊಮ್ಮಿದರು:

***ಸರೋಜಿನಿ ನಾಯ್ಡು*** – ಅಹಿಂಸಾ ಹೋರಾಟದಲ್ಲಿ ಮುಂಚೂಣಿಯ ನಾಯಕಿ.

*ಕಸ್ತೂರಿಬಾ ಗಾಂಧೀ* – ಗಾಂಧೀಜಿಯವರ ಜೀವನಸಹಚರಿ, ಸತ್ಯಾಗ್ರಹದ ಧೀರ ಮಹಿಳೆ. ಕಮಲಾ ನೆಹರು, ಅರುಣಾ ಆಸೆಫಲಿ, ಸುಚೇತಾ ಕೃಪ್ಲಾನಿ – ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಮಹಿಳಾ ನಾಯಕರಾಗಿ ಗುರುತಿಸಿಕೊಂಡರು.

**ಗಾಂಧೀಜಿಯವರ ಕೊಡುಗೆ – ಒಂದು ಮೌಲ್ಯಮಾಪನ**

ಗಾಂಧೀಜಿ ಮಹಿಳೆಯರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆದದ್ದು ಭಾರತೀಯ ಸಮಾಜದಲ್ಲಿ ಮಹಿಳಾ ಮುಕ್ತಿಯ ಪ್ರಾರಂಭಿಕ ಹಂತವೆಂದು ಪರಿಗಣಿಸಬಹುದು. ಅವರ ಮಾರ್ಗದರ್ಶನದಿಂದ ಮಹಿಳೆಯರು ಅಸ್ಪೃಶ್ಯತೆ ವಿರೋಧ, ಮದ್ಯವಿರೋಧ, ಗ್ರಾಮೀಣ ಕೈಗಾರಿಕೆ ಪ್ರಚಾರ, ಶಿಕ್ಷಣ, ರಾಜಕೀಯ ಹೋರಾಟಗಳಲ್ಲಿ ಶಕ್ತಿ ತೋರಿದರು. ಈ ಮೂಲಕ ಮಹಿಳೆಯರು ದೇಶಭಕ್ತಿ, ಸಾಮಾಜಿಕ ಬದಲಾವಣೆ ಮತ್ತು ರಾಜಕೀಯ ಅರಿವುಗಳಲ್ಲಿ ಮುಂದುವರಿದರು.

**ಉಪಸಂಹಾರ**

ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾತ್ರ ಗಾಂಧೀಜಿಯವರ ಪ್ರೇರಣೆಯಿಂದ ಬಲಿಷ್ಠವಾಯಿತು. ಅವರು ಮಹಿಳೆಯರನ್ನು ಹೋರಾಟದ "ಮೌನ ಶಕ್ತಿ"ಯಿಂದ "ಪ್ರಜ್ಞಾವಂತ ಕ್ರಾಂತಿಕಾರಿ ಶಕ್ತಿ"ಯನ್ನಾಗಿ ರೂಪಿಸಿದರು. ಹೀಗಾಗಿ, ಗಾಂಧೀಜಿಯವರ ಪಾತ್ರವು ಭಾರತೀಯ ಮಹಿಳೆಯರ ರಾಜಕೀಯ ಸಬಲೀಕರಣದ ಇತಿಹಾಸದಲ್ಲಿ ಅಳಿಸಲಾಗದ ಗುರುತು.

**ಪರಾಮರ್ಶನ ಗ್ರಂಥಗಳು**


- ಗಾಯತ್ರಿ, ಎನ್. (1998). *ಮಹಿಳಾ ಚಳುವಳಿಯ ಮಜಲುಗಳು.* ನವ ಕರ್ನಾಟಕ ಪ್ರಕಾಶನ
- ಹಾಲತಿ ಸೋಮಶೇಖರ. (2008). *ಸ್ತ್ರೀಯರ ವಿಸ್ಮಯ.* ಮೈಸೂರು ಪ್ರಕಾಶನ.
- ಸುನೀತ, ಎನ್. (2018). *ಮಹಿಳಾ ಹಕ್ಕುಗಳ ನೆಲೆಯಲ್ಲಿ ಗಾಂಧೀಜಿ.* ಪೃಥ್ವಿ ಪ್ರಕಾಶನ.
- Bipin Chandra. (1987). *India's Struggle for Independence.* penguin books inida.
- Bipin Chandra. (2009). *History of Modern India.* orient black swan